# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ.

ಉಪಸ್ಥಿತರು: ಮೀರ್ ಅನೀಸ್ ಅಹಮದ್ ಭಾ.ಆ.ಸೇ.,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ರೆ.ಅ/37/2015-16 ದಿನಾಂಕ: 23-05-2016

| ವಾದಿಗಳು | ಪ್ರತಿವಾದಿಗಳು |
| --- | --- |
| ಶ್ರೀ ಕೆ.ಎ. ಇಬ್ರಾಹಿಂ<br>ಬಿನ್. ಅಬೂ ಬ್ಯಾರಿ,<br>ಯಡವಾರೆ ಗ್ರಾಮ,<br>ಸೋಮವಾರಪೇಟೆ ತಾಲ್ಲೂಕು | 1. ತಹಶೀಲ್ದಾರ್,<br>ಸೋಮವಾರಪೇಟೆ ತಾಲ್ಲೂಕು,<br>ಸೋಮವಾರಪೇಟೆ.<br>2. ಕಂದಾಯ ಪರಿವೀಕ್ಷಕರು,<br>ಸೋಮವಾರಪೇಟೆ ಹೋಬಳಿ,<br>ಸೋಮವಾರಪೇಟೆ.<br>3. ಉಪ ವಿಭಾಗಾಧಿಕಾರಿ,<br>ಮಡಿಕೇರಿ ಉಪ ವಿಭಾಗ,<br>ಮಡಿಕೇರಿ. |

---

ದಾವಾ ಜಮೀನು: ಸೋಮವಾರಪೇಟೆ ತಾಲ್ಲೂಕು, ಯಡವಾರೆ ಗ್ರಾಮದ ಸ.ನಂ 68/1ರ 1.50 ಎಕರೆ.

*-*-*-*

ಪ್ರಸ್ತಾವನೆ:

ಮೇಲ್ಮನವಿದಾರರು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 49 ರಡಿ ಮೇಲ್ಮನವಿ 3ನೇ ಪ್ರತಿವಾದಿಗಳ ಆದೇಶ ಸಂಖ್ಯೆ:ಎನ್‌ಸಿಆರ್/35/2004-05, ದಿನಾಂಕ:28-06-2005ನ್ನು ಪ್ರಶ್ನಿಸಿದ್ದು, ಸದರಿ ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ಮೇಲ್ಮನವಿದಾರರಿಗೆ ನೋಟೀಸು ನೀಡಿ ವಾದ ಮಂಡನೆಗೆ ಅವಕಾಶ ಕೊಟ್ಟು ವಿಚಾರಣೆಗೆ ಒಳಪಡಿಸಲಾಯಿತು.

ಮೇಲ್ಮನವಿದಾರರ ಪರ ವಕೀಲರು ದಿನಾಂಕ:16-05-2016ರಂದು ವಿಚಾರಣೆಗೆ ಹಾಜರಾಗಿ ವಾದ ಮಂಡಿಸಿದ್ದು, ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1) ಮೇಲ್ಮನವಿದಾರರಿಗೆ ದಾವಾ ಜಮೀನನ್ನು 1ನೇ ಪ್ರತಿವಾದಿಗಳು ಮಂಜೂರು ಮಾಡಿ ದಿನಾಂಕ:19-07-2003ರಂದು ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ. ಮೇಲ್ಮನವಿದಾರರು ಸದರಿ ಜಾಗದಲ್ಲಿ ಕಾಫಿ, ಮೆಣಸು ಮತ್ತು ಇನ್ನಿತರೆ ಬೆಳೆಗಳನ್ನು ಬೆಳೆಯುತ್ತಾ ಯಾವುದೇ ತೊಂದರೆ ಇಲ್ಲದೇ ಅನುಭವಿಸಿಕೊಂಡು ಬರುತ್ತಿದ್ದಾರೆ. ಜಮೀನಿನ ಅಭಿವೃದ್ಧಿಗಾಗಿ ಸಾಲ ಮಾಡಿದ್ದು, ಸದರಿ ಜಾಗದಲ್ಲಿ ಒಂದು ವಾಸದ ಮನೆ ಕಟ್ಟಿ ಕುಟುಂಬದೊಂದಿಗೆ ವಾಸವಿರುತ್ತಾರೆ.

2) 1ನೇ ಪ್ರತಿವಾದಿಗಳು ಸಂ:ಒತ್ತುವರಿ(53)708/98-99, (50)24/91-92, ದಿನಾಂಕ: 04-01-2005 ರಂತೆ 3ನೇ ಪ್ರತಿವಾದಿಗಳಿಗೆ ವರದಿ ಸಲ್ಲಿಸಿ ಮೇಲ್ಮನವಿದಾರರಿಗೆ ಅಕ್ರಮ-ಸಕ್ರಮ ಸಮಿತಿಯಿಂದ ದಿನಾಂಕ:05-07-2003ರಂದು ದಾವಾ ಜಮೀನನ್ನು ಸಕ್ರಿಯಗೊಳಿಸಿ ಮಂಜೂರು ಮಾಡಲಾಗಿದ್ದು, ಸದರಿ ಜಾಗವು ಸಿ ಮತ್ತು ಡಿ ವರ್ಗಕ್ಕೆ ಸೇರಿದ ಜಮೀನಾಗಿರುವುದರಿಂದ ಮಂಜೂರಾತಿಯನ್ನು ರದ್ದುಗೊಳಿಸಲು ಕೋರಿರುತ್ತಾರೆ.

3) ಮೇಲ್ಮನವಿದಾರರು ದಾವಾ ಜಮೀನನ್ನು 1964ರಿಂದ ಒತ್ತುವರಿ ಮಾಡಿ ಅನುಭವ ಸ್ವಾಧೀನ ಹೊಂದಿದ್ದು, 1999ರಲ್ಲಿ ಜಮೀನು ಮಂಜೂರಾತಿಗಾಗಿ ನಮೂನೆ-53ರಲ್ಲಿ ಅರ್ಜಿ ಸಲ್ಲಿಸಿದ್ದು, ಅಕ್ರಮ-ಸಕ್ರಮ ಸಮಿತಿಯು ಸದರಿ ಜಮೀನನ್ನು ಮೇಲ್ಮನವಿದಾರರಿಗೆ ಸಕ್ರಿಯಗೊಳಿಸಿ ಮಂಜೂರು ಮಾಡಿರುತ್ತಾರೆ.

4) ಮೇಲ್ಮನವಿದಾರರು ಸದರಿ ಜಮೀನಿಗೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳನುಸಾರ ಟಿ.ಟಿ. ದಂಡ, ಜಾಗದ ಕ್ರಯ ಇತ್ಯಾದಿಗಳನ್ನು ಪಾವತಿಸಿದ್ದು, ಸಾಗುವಳಿ ಚೀಟಿಯನ್ನು ಹೊಂದಿಕೊಂಡಿರುತ್ತಾರೆ.

5) 1ನೇ ಪ್ರತಿವಾದಿಗಳ ಮಂಜೂರಾತಿ ಆದೇಶದನ್ವಯ ಕಡತವನ್ನು ಖಾತೆ ವರ್ಗಾವಣೆ ಬಗ್ಗೆ ಮುಂದಿನ ಕ್ರಮಕ್ಕಾಗಿ 2ನೇ ಪ್ರತಿವಾದಿಗಳಿಗೆ ಕಳುಹಿಸಲಾಗಿ, ಸದರಿಯವರು ಖಾತೆ ವರ್ಗಾವಣೆಗೆ ಕ್ರಮ ಕೈಗೊಳ್ಳದೇ ಸದರಿ ಜಮೀನು ಸಿ ಮತ್ತು ಡಿ ವರ್ಗಕ್ಕೆ ಸೇರಿರುವುದಾಗಿ ವರದಿಸಿದಂತೆ 1ನೇ ಪ್ರತಿವಾದಿಗಳು ಸದರಿಯವರ ವರದಿಯಂತೆ 3ನೇ ಪ್ರತಿವಾದಿಗಳಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನಾಧರಿಸಿ 3ನೇ ಪ್ರತಿವಾದಿಗಳು ಭೂಮಂಜೂರಾತಿ ನಿಯಮ 108ಕೆ ಪ್ರಕಾರ ಮೇಲ್ಮನವಿದಾರರಿಗೆ ಮಾಡಲಾದ ಮಂಜೂರಾತಿಯನ್ನು ರದ್ದುಗೊಳಿಸಿರುತ್ತಾರೆ.

6) 3ನೇ ಪ್ರತಿವಾದಿಗಳು ಪ್ರಶ್ನಿತ ಆದೇಶವು ಹೊರಡಿಸುವ ಮುನ್ನ ಭೂಕಂದಾಯ ಕಾಯ್ದೆಯ ನಿಯಮಗಳನ್ನು ಪಾಲಿಸಿರುವುದಿಲ್ಲ ಮತ್ತು ಮೇಲ್ಮನವಿದಾರರು ದಾವಾ ಜಮೀನಿನಲ್ಲಿ ದೀರ್ಘಕಾಲದಿಂದ ಒತ್ತುವರಿ ಮಾಡಿಕೊಂಡು ಸ್ವಾಧೀನ ಹೊಂದಿರುವುದರ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ.

7) ಆದುದರಿಂದ 3ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವು ಕಾನೂನು ಸಮ್ಮತವಾದುದಲ್ಲವಾದ್ದರಿಂದ ಸದರಿ ಆದೇಶವನ್ನು ಬದಿಗೊತ್ತಿ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶಿಸಬೇಕೆಂದು ಕೋರಿರುತ್ತಾರೆ.

ಮೇಲ್ಮನವಿದಾರರ ವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ದಾವಾ ಜಮೀನನ್ನು ಮೇಲ್ಮನವಿದಾರರು ಒತ್ತುವರಿ ಮಾಡಿ ವ್ಯವಸಾಯ ಮಾಡಿ ಸದರಿ ಜಮೀನನ್ನು ಸಕ್ರಿಯಗೊಳಿಸಿ ಮಂಜೂರು ಮಾಡುವಂತೆ ನಮೂನೆ-53ರಲ್ಲಿ ಅರ್ಜಿ ಸಲ್ಲಿಸಿದ ಮೇರೆ ಸೋಮವಾರಪೇಟೆ ತಾಲ್ಲೂಕು ಅಕ್ರಮ-ಸಕ್ರಮ ಸಮಿತಿಯಿಂದ ಮಂಜೂರಾತಿ ಮಾಡಲಾಗಿದ್ದು, ದಿನಾಂಕ:19-07-2003ರಂದು ಮೇಲ್ಮನವಿದಾರರಿಗೆ ಸಾಗುವಳಿ ಚೀಟಿ ನೀಡಲಾಗಿದೆ.

ಸದರಿ ಮಂಜೂರಾತಿಯಂತೆ ಮೇಲ್ಮನವಿದಾರರ ಹೆಸರು ಖಾತೆ ವರ್ಗಾಯಿಸುವ ಸಂದರ್ಭದಲ್ಲಿ ಸದರಿ ಜಮೀನು ಸಿ ಮತ್ತು ಡಿ ವರ್ಗದ ಜಮೀನೆಂದು ಕಾರಣ ನೀಡಿ ದಿನಾಂಕ:05-09-2003 ಖಾತೆ ವರ್ಗಾವಣೆಯನ್ನು ತಿರಸ್ಕರಿಸಿ ಮಂಜೂರಾತಿಯನ್ನು ರದ್ದುಗೊಳಿಸಲು 3ನೇ ಪ್ರತಿವಾದಿಗಳಿಗೆ 1ನೇ ಪ್ರತಿವಾದಿಗಳು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ವಯ 3ನೇ ಪ್ರತಿವಾದಿಗಳು ಕರ್ನಾಟಕ ಭೂಕಂದಾಯ ನಿಯಮಾವಳಿ 1966ರ ನಿಯಮ 108ಕೆ ರಡಿ ಸೋಮವಾರಪೇಟೆ ಅಕ್ರಮ-ಸಕ್ರಮ ಸಮಿತಿಯ ಮಂಜೂರಾತಿ ಆದೇಶವನ್ನು ವಜಾಗೊಳಿಸಿ ಆದೇಶಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ, ಮೇಲ್ಮನವಿದಾರರಿಗೆ ಸಂಬಂಧಿಸಿದ ಜಮೀನು ಸಿ ಮತ್ತು ಡಿ ವರ್ಗದ ಜಮೀನೆಂದು ದಿನಾಂಕ:05-09-2003ರಂದು ಮ್ಯುಟೇಷನ್ನು ತಿರಸ್ಕರಿಸಲಾಗಿದ್ದು, ಆದರೆ

ದಿನಾಂಕ:08-07-2005ರಂದು ಇದೇ ಸ.ನಂ.ನಲ್ಲಿ ಶ್ರೀಮತಿ ಬೋಜಮ್ಮ ರವರಿಗೆ ಮಂಜೂರಾದ 0.21 ಎಕರೆಗೆ ಮ್ಯುಟೇಷನ್ ಅಂಗೀಕರಿಸಿ ಆರ್‌ಟಿಸಿ ದಾಖಲಿಸಲಾಗಿದೆ.

1977-78ರ ಸಾಲಿನಲ್ಲಿ ನೋಟಿಫೈ ಆದ ಸಿ ಮತ್ತು ಡಿ ವರ್ಗದ ಜಮೀನಿನ ಪಟ್ಟಿಯಲ್ಲಿ ಯಡವಾರೆ ಗ್ರಾಮದ ಸ.ನಂ. 68 ಸೇರ್ಪಡೆಗೊಂಡಿರುವುದಿಲ್ಲ.

ಜಮ್ಮಾಬಂದಿಯ ಷರಾ ಕಾಲಂನಲ್ಲಿ ಸ.ನಂ. 68ರ 8.35 ಎಕರೆ ಪೈಕಿ 1.67 ಎಕರೆ ಪ್ರದೇಶವನ್ನು ಸಿ ಮತ್ತು ಡಿ ಜಾಗವಾಗಿ ಅರಣ್ಯ ಇಲಾಖೆಗೆ ವಹಿಸಿಕೊಡಲಾಗಿದೆ ಎಂದು ದಾಖಲಿದ್ದು, 2006ರಲ್ಲಿ ಅಂದರೆ ಮೇಲ್ಮನವಿದಾರರಾದ ಶ್ರೀ ಕೆ.ಎ. ಇಬ್ರಾಹಿಂ ಇವರಿಗೆ ಮಂಜೂರಾತಿಯಾದ 3 ವರ್ಷದ ನಂತರ "ಆರ್‌ಡಿ/46/ಎಲ್‌ಜಿಪಿ/2006, ದಿನಾಂಕ:17-10-2006ರ ಮೇರೆಗೆ ಪೂರ್ತಿ ಜಮೀನನ್ನು ಸಿ ಮತ್ತು ಡಿ ವರ್ಗದ ಜಮೀನೆಂದು ಪರಿಗಣಿಸಿ ಲ್ಯಾಂಡ್ ಬ್ಯಾಂಕಿಗೆ ಹಸ್ತಾಂತರಿಸಲಾಗಿದೆ" ಎಂದು ಆರ್‌ಟಿಸಿಯ ಕಾಲಂನಲ್ಲಿ ಷರಾ ನಮೂದಿಸಲಾಗಿದೆ.

ಸಿ ಮತ್ತು ಡಿ ಜಮೀನೆಂದು ಘೋಷಿಸುವ ಮೊದಲೇ ಮೇಲ್ಮನವಿದಾರರಿಗೆ ಸದರಿ ಜಮೀನು ಮಂಜೂರಾತಿಯಾಗಿದ್ದು, ಮ್ಯುಟೇಷನ್ ತಿರಸ್ಕರಿಸುವ ಸಮಯದಲ್ಲೂ ಸದರಿ ಜಮೀನು ಸಿ ಮತ್ತು ಡಿ ವರ್ಗದ ಜಮೀನಿಗೆ ಸೇರ್ಪಡೆಯಾಗಿರುವುದಿಲ್ಲ.

ಅಲ್ಲದೇ, ಒಂದುವರೆ ವರ್ಷದ ನಂತರ ಬೇರೆಯವರಿಗೆ ಇದೇ ಸ.ನಂ.ನಲ್ಲಿ ಮ್ಯುಟೇಷನ್ ಅಂಗೀಕರಿಸಲಾಗಿದೆ.

ಆದುದರಿಂದ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ವಾದವು ಒಪ್ಪತಕ್ಕದ್ದಾಗಿರುತ್ತದೆ. ಈ ಅಂಶಗಳನ್ನು ಪರಿಶೀಲಿಸದೆ ಹೊರಡಿಸಿರುವ ಪ್ರಶ್ನಿತ ಆದೇಶವು ನ್ಯಾಯ ಸಮ್ಮತವಾದುದಲ್ಲ ಎಂಬುದಾಗಿ ಕಂಡು ಬರುತ್ತದೆ. ಆದ್ದರಿಂದ ಪ್ರಕರಣದ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿಯನ್ನು ಪುರಸ್ಕರಿಸಿ 3ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವನ್ನು ಬದಿಗೊತ್ತಿ ಆದೇಶಿಸಿದೆ. ಮಂಜೂರಾತಿಯಂತೆ ದಾವಾ ಜಮೀನಿನ ಖಾತೆ ವರ್ಗಾವಣೆ ಬಗ್ಗೆ ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು ರವರು ಅಗತ್ಯ ಕ್ರಮ ಜರುಗಿಸುವುದು.

ಈ ಆದೇಶವನ್ನು ದಿನಾಂಕ:23-05-2016ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.